ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 291

2) ಮಾನ್ಯ ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸುವ ದಿನಾಂಕ : 17.02.2022

4) ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಪೊಲೀಸ್ ಇಲಾಖೆಯಲ್ಲಿ ಜಿಲ್ಲಾ ಮತ್ತು ಘಟಕವಾರು ಪೊಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅನುಕೂಲಕ್ಕಾಗಿ ನಿರ್ಮಿಸಿರುವ ಅತಿಥಿ ಗೃಹಗಳು ಮತ್ತು ಸಂಶೋಧನಾ ಸಂಸ್ಥೆಗಳ ಸಂಖ್ಯೆ ಎಷ್ಟು; ಹಾಗೂ ಸದರಿ ಅತಿಥಿ ಗೃಹಗಳ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ನೀಡಲಾಗಿದೆಯೇ; (ನೀಡಲಾಗಿದ್ದಲ್ಲಿ ಸದರಿ ಸಂಸ್ಥೆಗಳ ವಿವರಗಳನ್ನು ನೀಡುವುದು)	ಪೊಲೀಸ್ ಇಲಾಖೆಯಲ್ಲಿ ಒಟ್ಟು 39 ಅತಿಥಿ ಗೃಹಗಳು ಹಾಗೂ 02 ಸಂಶೋಧನಾ ಸಂಸ್ಥೆಗಳಿರುತ್ತದೆ. ಅತಿಥಿ ಗೃಹ ಮತ್ತು ಸಂಶೋಧನಾ ಸಂಸ್ಥೆಯ ನಿರ್ವಹಣೆಯನ್ನು ಯಾವುದೇ ಖಾಸಗಿ ಸಂಸ್ಥೆಗೆ ನೀಡಲಾಗಿರುವುದಿಲ್ಲ.
ಆ	ಸದರಿ ಅತಿಥಿ ಗೃಹಗಳು ಮತ್ತು ಸಂಶೋಧನಾ ಸಂಸ್ಥೆಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ ಮತ್ತು ಪೊಲೀಸ್ ಕೇಂದ್ರ ಕಛೇರಿಯಿಂದ ಹಾಗೂ ಘಟಕಗಳ ಕ್ಷೇಮನಿಧಿಯಿಂದ ಪಡೆದ ಆರ್ಥಿಕ ಸಹಾಯವೆಷ್ಟು; ಸದರಿ ಹಣವನ್ನು ಘಟಕವಾರು ಸಂಬಂಧಪಟ್ಟ ಘಟಕದ ಕೇಂದ್ರ ಕಛೇರಿಗೆ ವಾಪಸ್ ಜಮಾ ಮಾಡಲಾಗಿದೆಯೇ: ಜಮಾ ಮಾಡಿದ್ದಲ್ಲಿ ಪ್ರತ್ಯೇಕವಾಗಿ ಅತಿಥಿ ಗೃಹಗಳ ವಿವರಗಳನ್ನು ನೀಡುವುದು?	➢ ಬೆಂಗಳೂರು ನಗರದ ಆನಂದರಾವ್ ವೃತ್ತ ದಲ್ಲಿರುವ ಪೊಲೀಸ್ ಅತಿಥಿ ಗೃಹಕ್ಕೆ ಸರ್ಕಾರದಿಂದ ರೂ.1535.00ಲಕ್ಷಗಳು ಬಿಡುಗಡೆ ಯಾಗಿರುತ್ತದೆ. ➢ ಮೈಸೂರು ನಗರದಲ್ಲಿ ಸಂಶೋಧನಾ ಸಂಸ್ಥೆ ನಿರ್ಮಾಣಕ್ಕೆ ಘಟಕದ ಕ್ಷೇಮನಿಧಿಯಿಂದ ರೂ.6,30,198/- ಪಡೆದು ನಿರ್ಮಿಸಲಾಗಿದೆ. ➢ ಕೊಡಗು ಜಿಲ್ಲೆಯಲ್ಲಿನ ಅತಿಥಿ ಗೃಹ ನಿರ್ಮಾಣಕ್ಕೆ ಕೇಂದ್ರ ಕಲ್ಯಾಣ ನಿಧಿಯಿಂದ ರೂ.5.00 ಲಕ್ಷಗಳನ್ನು ಪಡೆದು ಹಿಂದಿರುಗಿಸಲಾಗಿದೆ. ➢ ಉಡುಪಿ ಜಿಲ್ಲೆಯಲ್ಲಿನ ಅತಿಥಿ ಗೃಹ ನಿರ್ಮಾಣವನ್ನು ಸಂಸತ್ ಸದಸ್ಯರ ನಿಧಿಯಿಂದ ನಿರ್ಮಾಣ ಮಾಡಲಾಗಿರುತ್ತದೆ. ➢ 1ನೇ ಪಡೆ ಕೆಎಸ್ಆರ್‌ಪಿ, ಬೆಂಗಳೂರಿನಲ್ಲಿ ಸಂಶೋಧನಾ ಸಂಸ್ಥೆ ನಿರ್ಮಾಣಕ್ಕೆ ಎಲ್ಲಾ ಪಡೆಗಳಿಂದ ಒಟ್ಟು ರೂ.22.000/-ಗಳನ್ನು ಪಡೆದಿದ್ದು, ಸದರಿ ಮೊತ್ತವನ್ನು ಹಿಂದಿರುಗಿಸಲಾಗಿರುತ್ತದೆ.
ಇ	ಸದರಿ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ನಿರ್ವಹಣೆಗಾಗಿ ಮತ್ತು ಮೇಲ್ವಿಚಾರಕರಾಗಿ ನಿಯೋಜಿಸಲಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಹೆಸರು, ಹುದ್ದೆ ಮತ್ತು ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆಂಬ ಬಗ್ಗೆ ವಿವರ ನೀಡುವುದು?	ಅನುಬಂಧ-ಎ ರಲ್ಲಿ ವಿವರಿಸಿದೆ.

-2/

ಈ	ಸದರಿ ಅತಿಥಿ ಗೃಹಗಳಲ್ಲಿ ನೆಲೆಸಿ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಸ್ವೀಕರಿಸಿದ ಬಾಡಿಗೆ ಹಣವನ್ನು ಸರ್ಕಾರಕ್ಕೆ / ಕ್ಷೇಮನಿಧಿಗೆ ಜಮಾ ಮಾಡದೇ ಲಕ್ಷಾಂತರ ರೂ.ಗಳ ದುರುಪಯೋಗ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡ ಕ್ರಮವೇನು?	➢ ಬಾಕಿ ಉಳಿದ ಅತಿಥಿ ಗೃಹಗಳು ತುಂಬ ಹಳೆಯದಾಗಿದ್ದು ನಿರ್ಮಾಣದ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಹಾಗೂ ಸದರಿ ಅತಿಥಿ ಗೃಹಗಳನ್ನು ಪೊಲೀಸ್ ಸಿಬ್ಬಂದಿಗಳಿಗೆ ಹುದ್ದೆ ಅನುಸಾರವಾಗಿ ತಂಗಲು ರೂ.100/200/-ಬಾಡಿಗೆ ವಿಧಿಸಲಾಗುತ್ತಿದ್ದು, ಈ ರೀತಿ ಸಂಗ್ರಹವಾದ ಬಾಡಿಗೆಯನ್ನು ಘಟಕದಲ್ಲಿ ಪ್ರತ್ಯೇಕ ಖಾತೆ ತೆರೆದು ಜಮಾ ಮಾಡಲಾಗಿರುತ್ತದೆ. ಸದರಿ ಮೊತ್ತವನ್ನು ಅತಿಥಿ ಗೃಹ ದುರಸ್ಥಿ ಹಾಗೂ ಇನ್ನಿತರ ಖರ್ಚುಗಳಿಗೆ ಬಳಸಲಾಗುತ್ತಿದೆ. ➢ ಪ್ರಸ್ತುತ ಅತಿಥಿ ಗೃಹಗಳ ನಿರ್ವಹಣೆಯಲ್ಲಿ ಯಾವುದೇ ದುರುಪಯೋಗದ ಪ್ರಕರಣಗಳು ಕಂಡುಬಂದಿರುವುದಿಲ್ಲ.

ಸಂಖ್ಯೆ:ಹೆಚ್‌ಡಿ 15 ಪಿಬಿಎಲ್ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-ಎ

ಕ್ರ.ಸಂ	ಘಟಕ	ಪೊಲೀಸ್ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ನಿರ್ವಹಣೆಗಾಗಿ ಮತ್ತು ಮೇಲ್ವಿಚಾರಕರಾಗಿ ನಿಯೋಜಿಸಲಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಹೆಸರು, ಹುದ್ದೆ ಮತ್ತು ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆಂಬ ಬಗ್ಗೆ ವಿವರ ಈ ಕೆಳಕಡತಿದೆ.
1.	ಬೆಂಗಳೂರು ನಗರ	ಶ್ರೀ ವೆಂಕಟೇಶ್ ಟಿ, ಎಸಿಪಿ ಸಿಎಆರ್ ಕೇಂದ್ರ,ದಿ:10/01/2022 ಮತ್ತು ಶ್ರೀ ನವೀನ್ ವೈ.ಕೆ. ಪಿಐ, ದಿ:21/8/2021 ರಿಂದ ಮೇಲ್ವಿಚಾರಕರಾಗಿರುತ್ತಾರೆ
2.	ಮೈಸೂರು ನಗರ:-01 ಸಂಶೋಧನ ಸಂಸ್ಥೆ	ಉಪ-ಪೊಲೀಸ್ ಆಯುಕ್ತರು, ಸಿ.ಎ.ಆರ್ ಮೈಸೂರು ನಗರ ರವರ ಮೇಲ್ವಿಚಾರಣೆಯಲ್ಲಿದ್ದು, ಶ್ರೀ ಸಿದ್ದೀಜಿ ರಾವ್-ಎಹೆಚ್‌ಸಿ-121 ರವರು 2/2017 ರಿಂದ ಮೇಲ್ವಿಚಾರಕರಾಗಿರುತ್ತಾರೆ
3.	ಹುಬ್ಬಳ್ಳಿ-ಧಾರವಾಡ ನಗರ:-03 ಅತಿಥಿ ಗೃಹ	ಶ್ರೀ ಎಂಎಸ್ ಕಂಬಳ ಎಹೆಚ್‌ಸಿ, ಸಿಎಆರ್ ಹುಬ್ಬಳ್ಳಿ-ಧಾರವಾಡ ವರ್ಷ:2011 ರಿಂದ ಶ್ರೀ ಎಂ.ಎನ್ ಸನದಿ ಎಪಿಸಿ-754, ಸಿಎಆರ್‌ವರ್ಷ:2019 ಮೇಲ್ವಿಚಾರಕರಾಗಿರುತ್ತಾರೆ
4.	ಬಾಗಲಕೋಟೆ ಜಿಲ್ಲೆ-01ಹಿರಿಯ ಮತ್ತು 01 ಕಿರಿಯ ಅತಿಥಿ ಗೃಹ	ಶ್ರೀ ಭರತ ಕಟ್ಟಿಮನಿ, ಹೆಚ್‌ಸಿ-627ದಿ:1/1/2019 ರಿಂದ ಮೇಲ್ವಿಚಾರಕರಾಗಿರುತ್ತಾರೆ
5.	ಗದಗ ಜಿಲ್ಲೆ:-01 ಅತಿಥಿ ಗೃಹವಿದೆ	ಡಿಎಸ್‌ಪಿ, ಡಿಎಆರ್ ಗದಗ ರವರು ದಿ:10/6/2020ರಿಂದ ಮೇಲ್ವಿಚಾರಕರಾಗಿರುತ್ತಾರೆ.
6.	ಧಾರವಾಡ ಜಿಲ್ಲೆ:-01 ಅತಿಥಿ ಗೃಹ	ಅತಿಥಿ ಗೃಹ ಮೇಲ್ವಿಚಾರಕರಾಗಿ ಶ್ರೀ ಎ.ಎ.ಬೆಳಗಾವಿ ಎಆರ್‌ಎಸ್‌ಐ ಡಿಎಆರ್, ಧಾರವಾಡ ದಿ:1/12/2022ರಿಂದ ಮೇಲ್ವಿಚಾರಕರಾಗಿರುತ್ತಾರೆ.
7.	ಕಲಬುರಗಿ ಜಿಲ್ಲೆ:-02 ಅತಿಥಿ ಗೃಹ	ಶ್ರೀ ಉಮೇಶ ಎಹೆಚ್‌ಸಿ-53 ಮತ್ತು ರವಿಕುಮಾರ ಎಪಿಸಿ-280 ಡಿಎಆರ್ ಘಟಕ ರವರುಗಳು ಮೇಲ್ವಿಚಾರಕರಾಗಿರುತ್ತಾರೆ
8.	ಮೈಸೂರು ಜಿಲ್ಲೆ:-01 ಅತಿಥಿ ಗೃಹ	ಡಿವೈಎಸ್‌ಪಿ ಮೈಸೂರು ರವರು ದಿ:7/7/2006ರಿಂದ ಮೇಲ್ವಿಚಾರಕರಾಗಿರುತ್ತಾರೆ
9.	ದಕ್ಷಿಣ ಕನ್ನಡ ಜಿಲ್ಲೆ:-01 ಅತಿಥಿ ಗೃಹ	ವಿನೋದ ಪಿ.ವಿ ಎಪಿಸಿ-89 ಮತ್ತು ದಿವ್ಯ ಪ್ರಸಾದ ಎಪಿಸಿ-37 ರವರು 29/8/2020ರಿಂದ ಮೇಲ್ವಿಚಾರಕರಾಗಿರುತ್ತಾರೆ
10.	ಬೀದರ ಜಿಲ್ಲೆ:-02ಅತಿಥಿ ಗೃಹ	ಡಿಎಸ್‌ಪಿ ಡಿಎಆರ್ ಬೀದರ ಉಸ್ತುವಾರಿ ಅಧಿಕಾರಿ ಶ್ರೀ ಗುರುಲಿಂಗಯ್ಯ ಸ್ವಾಮಿ ಎಹೆಚ್‌ಸಿ-63ದಿ:2017 ಶ್ರೀ ಮಧುಕರ ಠಾಕೂರ ಎಪಿಸಿ-380 ದಿ:2012 ಶ್ರೀ ಮಾಜೀದ ಎಹೆಚ್‌ಸಿ-68ರವರು ಗಳು 28/3/2018 ಮೇಲ್ವಿಚಾರಕರಾಗಿರುತ್ತಾರೆ

11.	ಉತ್ತರ ಕನ್ನಡ, ಕಾರವಾರ:-01 ಅತಿಥಿ ಗೃಹ	ಪೊಲೀಸ್ ಉಪಾಧೀಕ್ಷಕರು, ಕಾರವಾರ ಉಪವಿಭಾಗ ಕಾರವಾರ ಶ್ರೀ ಎಹೆಚ್‌ಸಿ-964 ದಿನೇಶ್ ಆರ್ ಗೌಡ (ದಿನಾಂಕ-07/03/2019 ರಿಂದ ಮೇಲ್ವಿಚಾರಕರಾಗಿರುತ್ತಾರೆ
12.	ಚಾಮರಾಜನಗರ ಜಿಲ್ಲೆ:-01 ಅತಿಥಿ ಗೃಹ	ಶ್ರೀ ರಮೇಶ್‌ಕುಮಾರ್, ಎಹೆಚ್‌ಸಿ-07 ಡಿಎಆರ್ ದಿ:22/9/2021ರವರನ್ನು ಮೇಲ್ವಿಚಾರಕರಾಗಿರುತ್ತಾರೆ
13.	ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ ಮಡಿಕೇರಿ:02 ಅತಿಥಿ ಗೃಹ	ಶ್ರೀ ಚೆನ್ನಕೇಶವ ಎಸ್.ಸಿ,ಎಆರ್‌ಎಸ್‌ಐ ದಿ:20/8/2019 ಹಾಗೂ ಶ್ರೀ ವಿಜಯ್ ಎಂ.ಎಸ್.ಎಹೆಚ್ ಸಿ-46 ದಿ:22/10/2020ರಿಂದ ನೇಮಕ ಮಾಡಲಾಗಿದೆ.
14.	ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ.:-01 ಅತಿಥಿ	ಶ್ರೀ ಜಯಕುಮಾರ್ ಎಆರ್‌ಎಸ್‌ಐ ರವರು 12/1/2021 ನಿರ್ವಹಣ ಅಧಿಕಾರಿ ಶ್ರೀ ಸಂಪತ್ ಕುಮಾರ್ ಎಪಿಸಿ-1543ದಿ:15/9/2019 ಶ್ರೀ ಗೂಳಯ್ಯ ಪೂಜಾರಿ ಎಪಿಸಿ-260 ರವರು ದಿ:28/3/2018 ಮೇಲ್ವಿಚಾರಕರಾಗಿರುತ್ತಾರೆ.
15.	ಪೊಲೀಸ್ ಅಧೀಕ್ಷಕರು, ರಾಯಚೂರು ಜಿಲ್ಲೆ.:-01 ಅತಿಥಿ	ಶ್ರೀ ಸಿದ್ರಾಮ ಎಆರ್‌ಎಸ್‌ಐ ರವರನ್ನು 1/1/2021 ರಿಂದ ಮೇಲ್ವಿಚಾರಕರಾಗಿರುತ್ತಾರೆ
16.	ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ.:-01 ಅತಿಥಿ	ಶ್ರೀ ರಮೇಶ್ ಕುಮಾರ್ ಎಹೆಚ್‌ಸಿ-07, ಡಿಎಆರ್, ದಿ:22/1/2021 ರಿಂದ ಮೇಲ್ವಿಚಾರಕರಾಗಿರುತ್ತಾರೆ
17.	ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ:-01 ಅತಿಥಿ ಗೃಹ	ಶ್ರೀ ನಂದೀಶ್.ಟಿ.ಹೆಚ್, ಎಹೆಚ್‌ಸಿ-55 ಡಿಎಆರ್, ಶಿವಮೊಗ್ಗ ರವರು ದಿ:15/6/2016 ರವರು ಮೇಲ್ವಿಚಾರಕರಾಗಿರುತ್ತಾರೆ.
18.	ಪೊಲೀಸ್ ಅಧೀಕ್ಷಕರು, ಹಾವೇರಿ ಜಿಲ್ಲೆ:-02 ಅತಿಥಿ ಗೃಹ	ಶ್ರೀ ಎಂ.ಎನ್.ಹುಡೇನ್ , ಎಪಿಸಿ-200 ಡಿಎಆರ್ ಹಾವೇರಿದಿ:12/12/2016 ಶ್ರೀ ಫಕ್ಕೀರೇಶ ಎಪಿಸಿ-302 ಹುಬ್ಬಳ್ಳಿ, ಡಿಆರ್ ಹಾವೇರಿದಿ:15/01/2022 ಶ್ರೀ ರವಿ ಮಾಳಗೇರ, ಎಹೆಚ್‌ಸಿ-53,ಡಿಎಆರ್ ಹಾವೇರಿದಿ:09/8/2016 ಶ್ರೀ ಗಿರೀಶ್, ನಾಗವಂದ , ಎಪಿಸಿ-151 ಡಿಎಆರ್, ಹಾವೇರಿದಿ:24/7/2014 ರಿಂದ ಮೇಲ್ವಿಚಾರಕರಾಗಿರುತ್ತಾರೆ
19.	1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು	ಶ್ರೀ ಮುಪ್ಪಣ್ಣ ಸಹಾಯಕ ಕಮಾಡೆಂಟ್,9ನೇ ಪಡೆ ದಿ:2/9/2021ರಿಂದ ಮತ್ತು ಶ್ರೀ ಸುರೇಶ ಎಂ.ಜೆ ಸಹಾಯಕ ಕಮಾಂಡೆಂಟ್ ದಿ:8/9/2021 ರಿಂದ ಮೇಲ್ವಿಚಾರಕರಾಗಿರುತ್ತಾರೆ
20.	ಕಮಾಂಡೆಂಟ್, 5ನೇ ಪಡೆ ಕೆಎಸ್‌ಆರ್‌ಪಿ, ಮೈಸೂರು09	ಶ್ರೀ ವೆಂಕಟೇಶ್, ಹೆಚ್ಸಿ-153ದಿ:9/6/2021 ರಿಂದ ಮೇಲ್ವಿಚಾರಣೆಯಲ್ಲಿದೆ.
21.	ಕಮಾಂಡೆಂಟ್ 9ನೇ ಪಡೆ, ಕೆಎಸ್‌ಆರ್‌ಪಿ,ಬೆಂಗಳೂರು:-01 ಅತಿಥಿ ಗೃಹ	ಯಾವುದೇ ಅಧಿಕಾರಿ/ಸಿಬ್ಬಂದಿಯನ್ನು ನೇಮಿಸಿರುವುದಿಲ್ಲ.
22.	ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು:-03 ಅತಿಥಿ ಗೃಹ	ಶ್ರೀ ಅಶೋಕ ಕುಮಾರ್, ಡಿವೈಎಸ್‌ಪಿ ದಿ:29/10/2020 ಮೇಲ್ವಿಚಾರಕರಾಗಿರುತ್ತಾರೆ